# ಚಳ್ಳಕೆರೆ ಹಿಂದಿ ಶಿಕ್ಷಕರ ವೇದಿಕೆ , ಚಿತ್ರದುರ್ಗ ಜಿಲ್ಲೆ.

## 10ನೇ ತರಗತಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ಕಾರ್ಯಯೋಜನೆ 2024_25

**ಮಾರ್ಗದರ್ಶನ : ಶ್ರೀ ಸುರೇಶ್ ಕೆ.ಎಸ್** ಕ್ಷೇತ್ರ ಶಿಕ್ಷಣಾಧಿಕಾರಿಗಳು.

**ಸಲಹೆ : ಶಿವಣ್ಣ** ವಿಷಯ ಪರಿವೀಕ್ಷಕರು ಉಪನಿರ್ದೇಶಕರ ಕಚೇರಿ ಚಿತ್ರದುರ್ಗ

**ಅಧ್ಯಕ್ಷರು : ಶ್ರೀ ಬಿ ಎಸ್ ಸುರೇಶ್ ನಾಯ್ಕ ಬಿಸಿನೀರು ಮುದ್ದಪ್ಪ ಸರ್ಕಾರಿ ಪ್ರೌಢಶಾಲೆ**

**ಉಪಾಧ್ಯಕ್ಷರು : ಶ್ರೀ ಗೋವಿಂದ ನಾಯ್ಕ ಸ್ವಾಮಿ ವಿವೇಕಾನಂದ ಪ್ರೌಢಶಾಲೆ**

**ಕಾರ್ಯದರ್ಶಿ : ಶ್ರೀ ರಂಗಪ್ಪ ಸ.ಶಿ ವಿಶ್ವಭಾರತಿ ಪ್ರೌಢಶಾಲೆ**

**ಖಜಾಂಚಿ : ಶ್ರೀಮತಿ ರೆಹನಾ ಡಿ ಎಂ ಎಸ್ ಸ.ಶಿ ಸರ್ಕಾರಿ ಪ್ರೌಢಶಾಲೆ , ತಳಕು .**

**ಶ್ರೀ ಶಿವಣ್ಣ ಸ ಶಿ ನಿರ್ದೇಶಕರು ಪರಶುರಾಮಪುರ ಹೋಬಳಿ**

**ಎಸ್ ವಿ ಎಸ್ ಆರ್ ಹೆಚ್ ಎಸ್ ಶಾಲೆ , ಚೌಳೂರು**

**ಶ್ರೀ ಜಾಕೀರ್ ಮಹ್ಮದ್ ಸ ಶಿ ನಿರ್ದೇಶಕರು ನಾಯಕನಹಟ್ಟಿ ಹೋಬಳಿ**

**ಸರ್ಕಾರಿ ಪ್ರೌಢಶಾಲೆ , ತಿಮ್ಮಪ್ಪಯ್ಯನಹಳ್ಳಿ**

**ಶ್ರೀ ಓ ಚಂದ್ರಶೇಖರ್ ಸ ಶಿ ನಿರ್ದೇಶಕರು ತಳಕು ಹೋಬಳಿ**

**ಎಸ್ ಎಂ ಹೆಚ್ ಎಸ್ ಶಾಲೆ ಹನುಮಂತನಹಳ್ಳಿ**

**ಶ್ರೀ ವೀರಣ್ಣ ನಿರ್ದೇಶಕರು ಕಸಬಾ ಹೋಬಳಿ**

**ಬಾಪೂಜಿ ಪ್ರೌಢಶಾಲೆ , ಚಳ್ಳಕೆರೆ**

# ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ಕ್ರಿಯಾ ಯೋಜನೆ

**Target _41**

**ವಿಷಯ : ತೃತಿಯ ಭಾಷೆ ಹಿಂದಿ**

**2024_25ನೇ ಸಾಲಿನ ಎಸ್ ಎಸ್ ಎಲ್ ಸಿ ಮುಖ್ಯ ಪರೀಕ್ಷೆಗೆ ಪಠ್ಯಕ್ರಮದ ನಿಯಮಿತ ಕಲಿಕೆಯೊಂದಿಗೆ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ಕ್ರಿಯಾ ಯೋಜನೆ.**

| ಕ್ರ.ಸಂ | ತಿಂಗಳು | ಬೋಧಿಸಬೇಕಾದ ಕಲಿಕಾಂಶ | ಕೈಗೊಳ್ಳಬಹುದಾದ ಚಟುವಟಿಕೆಗಳು | ವಿದ್ಯಾರ್ಥಿ ಗಳಿಸಬಹುದಾದ ಅಂಕಗಳು |
|---|---|---|---|---|
| 1 | ಜೂನ್ ಮತ್ತು ಜುಲೈ -2024 | ಒಂದು ಅಂಕದ ಪ್ರಶ್ನೆಗಳು | ತೃತೀಯ ಭಾಷೆಯಾದ್ದರಿಂದ ಮೊದಲಿಗೆ, ಪದಗಳಿಂದ ಸರಳ ವಾಕ್ಯಗಳನ್ನು ರಚಿಸುವ ವಿಧಾನವನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು ಗದ್ಯ ಭಾಗದಿಂದ 3 ಮತ್ತು ಪದ್ಯಭಾಗದಿಂದ 1 ಬಹುಮುಖ್ಯ ಪ್ರಶ್ನೆಕೋಠಿ ತಯಾರಿಸಿ ಅಭ್ಯಾಸ ಮಾಡಿಸುವುದು. | 4 |
| | | | ಕಪ್ಪು ಹಲಗೆಯ ಮೇಲೆ ಪ್ರತಿ ವಿದ್ಯಾರ್ಥಿಯನ್ನು ಕರೆಸಿ ಬರೆಸುವುದು. | |
| | | | ಗೃಹಪಾಠ ನೀಡಿ ಬರೆದು ತಂದಿದ್ದನ್ನು ತಿದ್ದುವುದರ ಮೂಲಕ ಸರಿಯಾದ ಕಲಿಕೆಗೆ ಅನುವು ಮಾಡಿಕೊಡುವುದು. | |
| | | | ಒಂದು ಅಂಕದ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಕಿರು ಪರೀಕ್ಷೆ ನಡೆಸುವುದು. | |
| 2 | ಜೂನ್ ಮತ್ತು ಜುಲೈ -2024 | कंठस्थ कविता : कोशिश करने वालों की कभी हार नहीं होती | ಕಂಠ ಪಾಠಕ್ಕಿರುವ ಕವಿತೆಯನ್ನು ರಾಗವಾಗಿ ಹಾಡುವುದು ಮತ್ತು ಹಾಡಿಸುವುದು | 4 |
| | | | ವಿದ್ಯಾರ್ಥಿಗಳಿಗೆ ಪದ್ಯವನ್ನು ಖಂಡಗಳಾಗಿ ವಿಭಜಿಸಿ ಒಂದೊಂದೇ ಸಾಲುಗಳನ್ನು ಬರೆಸುವುದು. | |
| | | | ವಿದ್ಯಾರ್ಥಿಗಳಿಂದ ಹಾಡಿಸುವುದು ಮತ್ತು ಬರೆಯಲು ಹೇಳುವುದು ಹಿಂದಿ ಶಿಕ್ಷಕರು ಕೊಠಡಿ ಪ್ರವೇಶ ಮಾಡಿದ ಕೂಡಲೇ ಶುಬೋದಯ ದ ಬದಲಾಗಿ ಎಲ್ಲಾ ವಿದ್ಯಾರ್ಥಿಗಳಿಂದ ಪದ್ಯ ಹೇಳಿಸುವುದು . | |
| | | | ಪದ್ಯಕ್ಕೆ ಸಂಬಂಧಿಸಿದ ವಿಡಿಯೋ ತೋರಿಸುವುದರ ಮೂಲಕ, ಆಡಿಯೋವನ್ನು ಕೇಳಿಸುವ ಮೂಲಕ, ಕವಿತೆಯನ್ನು ಸ್ವತಃ ಹಾಡುವ ಮೂಲಕ ಮತ್ತು ಪ್ರತಿ ವಿದ್ಯಾರ್ಥಿಗೆ ಕಪ್ಪು ಹಲಗೆಯಲ್ಲಿ ಬರೆಯಲು ಕಲಿಸುವ ಮೂಲಕ ತಪ್ಪಿಲ್ಲದೆ ಕವಿತೆ ಬರೆಯಲು ಕಲಿಸುವುದು. | |

| ಕ್ರ.ಸಂ | ದಿನಾಂಕ | ಬೋಧಿಸಬೇಕಾದ ಕಲಿಕಾಂಶ | ಕೈಗೊಳ್ಳಬಹುದಾದ ಚಟುವಟಿಕೆಗಳು | ವಿದ್ಯಾರ್ಥಿ ಗಳಿಸಬಹುದಾದ ಅಂಕಗಳು |
|---|---|---|---|---|
| ೩ | ಆಗಸ್ಟ್ ಮತ್ತು ಸೆಪ್ಟೆಂಬರ್ -2024 | ಪತ್ರ ಲೇಖನ | ಪತ್ರ ಲೇಖನದ ಬಗ್ಗೆ ಸಮಗ್ರ ಮಾಹಿತಿ ನೀಡಿ ಪತ್ರದ ಪ್ರಮುಖ ಭಾಗಗಳ[ **Body Of The Letter** ] ಪ್ರತಿ ಒಂದೊಂದು ಭಾಗದಂತೆ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡುವುದು. | ೫ |
| | | | ಅವರು ಬರೆದುಒಂಡು ಬಂದಿರುವ ಷೀಟ್ ಗಳನ್ನು ಬೋರ್ಟ್ ಮೇಲೆ ಐದು ಬಾಕ್ಸ್ ಬೆರದು ಪ್ರದರ್ಶಿಸಿ ಬೋರ್ಡ್ ಮೇಲೆ ಅಂಟಿಸಲು ಹೇಳುವುದು. | |
| | | | ಪತ್ರ ಲೇಖನ ಬರೆಯುವ ಬಗ್ಗೆ ವಿಡಿಯೋ ತೋರಿಸುವುದು. | |
| | | | ಕಪ್ಪು ಹಲಗೆಯ ಮೇಲೆ ಪ್ರತಿ ವಿದ್ಯಾರ್ಥಿಯನ್ನು ಕರೆಸಿ ಬರೆಸುವುದು. | |
| | | | ತರಗತಿಯಲ್ಲೇ ಪತ್ರ ಬರೆಸುವುದು | |
| | | | ಪತ್ರದ ಪ್ರಮುಖ ಈ ಐದು ಅಂಶಗಳ ಬಗ್ಗೆ ಪುನರ್ಮನನ ಮಾಡಿಸುವುದು. | |
| ಕ್ರ.ಸಂ | ದಿನಾಂಕ | ಬೋಧಿಸಬೇಕಾದ ಕಲಿಕಾಂಶ | ಕೈಗೊಳ್ಳಬಹುದಾದ ಚಟುವಟಿಕೆಗಳು | ವಿದ್ಯಾರ್ಥಿ ಗಳಿಸಬಹುದಾದ ಅಂಕಗಳು |
| 4 | ಆಗಸ್ಟ್ ಮತ್ತು ಸೆಪ್ಟೆಂಬರ್ -2024 | ಪ್ಯಾರಾಗ್ರಾಫ್ ಓದಿ ಪ್ರಶ್ನೆಗಳಿಗೆ ಉತ್ತರಿಸುವುದು | ತರಗತಿಯಲ್ಲಿ ಮೊದಲು ಚಿಕ್ಕ -ಚಿಕ್ಕ ಕಥೆಗಳನ್ನು ಹೇಳಿ ಕಥೆಗೆ ಸಂಬಂಧಿಸಿದ ಪ್ರಶ್ನೆಳನ್ನು ಕೇಳುವುದು | |
| | | | ಪ್ಯಾರಾಗ್ರಾಫ್ ಓದಿ ಎಲ್ಲಾ ಪ್ರಶ್ನೆಗಳಿಗೂ ಕ್ರಮವಾಗಿ ಉತ್ತರಗಳಿರುವುದಿಲ್ಲ ಎಂಬಾ ಅಂಶ ಮನದಟ್ಟು ಮಾಡಿಸುವುದು | 4 |
| | | | ಚಿಕ್ಕ ಚಿಕ್ಕ ತುಣುಕುಗಳಿರುವ ಆಡಿಯೋ ಕ್ಲಿಪ್ ಕೇಳಿಸುವುದು ಮತ್ತು ಪ್ರಶ್ನೆಗಳನ್ನು ಕೇಳುವುದು | |
| | | | ಚಿಕ್ಕ ಚಿಕ್ಕ ತುಣುಕುಗಳಿರುವ ವಿಡಿಯೋ ಕ್ಲಿಪ್ ತೋರಿಸುವುದು ಮತ್ತು ಪ್ರಶ್ನೆಗಳನ್ನು ಕೇಳುವುದು | |
| | | | ಒಬ್ಬ ವಿದ್ಯಾರ್ಥಿಯಿಂದ ಕಥೆ ಹೇಳಿಸಿ ಬೇರೆ ವಿದ್ಯಾರ್ಥಿಗಳಿಗೆ ಕಥೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು | |
| | | | ಎರಡು ಮೂರು ಚಿಕ್ಕ ಚಿಕ್ಕ ಕಥೆ ಬರೆಸಿ ಪ್ರಶ್ನೆಗಳಿಗೆ ಉತ್ತರ ಬರೆದುಕೊಂಡು ಬರಲು ಹೇಳುವುದು | |
| | | | ಉತ್ತರ ಹುಡುಕುವಲ್ಲಿ ವಿದ್ಯಾರ್ಥಿಗೆ ಎದುರಾದ ಸಮಸ್ಯೆ ಗೆ ಪರಿಹಾರ ಒದಗಿಸುವುದು | |

| ಕ್ರ.ಸಂ | ದಿನಾಂಕ | ಬೋಧಿಸಬೇಕಾದ ಕಲಿಕಾಂಶ | ಕೈಗೊಳ್ಳಬಹುದಾದ ಚಟುವಟಿಕೆಗಳು | ವಿದ್ಯಾರ್ಥಿ ಗಳಿಸಬಹುದಾದ ಅಂಕಗಳು |
| --- | --- | --- | --- | --- |
| 5 | ನವೆಂಬರ್ ಮತ್ತು ಡಿಸೆಂಬರ್ -2024 | ವ್ಯಾಕರಣಾಂಶ | ತೃತೀಯ ಭಾಷೆ ಹಿಂದಿಗೆ ವಸ್ತುನಿಷ್ಠ ಮಾದರಿಯಲ್ಲಿ ಒಟ್ಟು 11 ವ್ಯಾರಣಾಂಶಗಳಿದ್ದು ಅವುಗಳಲ್ಲಿ ೮ ವ್ಯಾರಣಾಂಶಗಳಿಗೆ ಸಂಬಂಧಿಸಿದಂತೆ ಪ್ರಶ್ನೆ ಗಳನ್ನು ಈ ಅಂಶವನ್ನು ಮಕ್ಕಳಿಗೆ ವಿವರಿಸುವುದು . | ೮ |
| | | ವಿಲೋಮ / ವಿರುದ್ಧ ಶಬ್ದ | ಪಠ್ಯದ ಭಾಷಾಭ್ಯಾಸದಲ್ಲಿರು ವಿಲೋಮ ಶಬ್ದಗಳನ್ನು ಒಂದೆಡೆ ಬರೆಸಿ ಅವುಗಳಲ್ಲಿ ಬಹುಮುಖ್ಯವಾದವುಗಳನ್ನು ಆಭ್ಯಾಸ ಮಾಡಿಸುವುದು | |
| | | ಸಂಧಿ | ದೀರ್ಘಸಂಧಿ: ಪದಗಳಲ್ಲಿ ಎರಡನೇ ಪದ ದೀರ್ಘ ಆಗಿರುವ ಉದಾಹರಣೆಗಳನ್ನು ನೀಡಿ ಅಭ್ಯಾಸ ಮಾಡಿಸುವುದು . ಉದಾ : ದೇವಾಲಯ , ಧರ್ಮಾತ್ಮ, ವಿದ್ಯಾಲಯ ಹೀಗೆ_<br><br>ಗುಣ ಸಂಧಿ : ಪದದಲ್ಲಿ ಎ ಕಾರ ಓ ಕಾರ ಅರ್ ಕಾರ್ ಬರುವಂತ ಶಬ್ದಗಳು ಉದಾ : ಸುರೇಶ , ಪರೋಪಕಾರ , ಮಹರ್ಷಿ . | |
| | | ಪ್ರೇರಣಾರ್ಥಕ ಕ್ರಿಯಾ | ಪರೀಕ್ಷೆಯಲ್ಲಿ ಕೇವಲ ಪ್ರಥಮ ಪ್ರೇರಣಾರ್ಥಕ ಕ್ರಿಯಾ ಮಾತ್ರ ಕೇಳುವುದರಿಂದ ಷಾರ್ಟ್ ಕಟ್ ಮೆಥೆಡ್ ನಲ್ಲಿ ಕಲಿಸುವುದು ಪ್ರಥಮ ಪ್ರೇರಣಾರ್ಥಕ ಎರಡನೇ ಅಥವಾ ಮೂರನೇ ಪದ ಆ ಕಾರ ವಿರುತ್ತದೆ ಮತ್ತು ದ್ವಿತೀಯ ಪ್ರೇರಣಾರ್ಥಕ ಕ್ರಿಯಾ ಆಗುವಾಗ ಪದದ ಮೂರನೇ ಪದ ವಾ ಕಾರ ವಿರುತ್ತದೆ ಅಂಬಾ ಅಂಶ ಮಕ್ಕಳಿಗೆ ಮನದಟ್ಟು ಮಾಡಿಸಿ ಉದಾ ಗಳನ್ನು ತೋರಿಸುವುದು | |
| | | ಸಮಾಸ | ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆ ಮತ್ತು ಕೇಳಬಹದಾದ ಸಮಾಸಗಳ ಬಗ್ಗೆ ಮಾಹಿತಿ ನೀಡಿ ಷಾರ್ಟ್ ಕಟ್ ಮೆಥೆಡ್ ನಲ್ಲಿ ಕಲಿಸುವುದು<br>तत्पुरुष समास : जिस समास पद मे उत्तर पद प्रधान होता है। उसे तत्पुरुष समास कहते है : राजकुमार , धर्म ग्रंथ रसोईघर<br>द्विगु समास : पहला संख्यावाचक शब्द आता है। उदा : नवरात्रि , त्रिनेत्र , दोपहर<br>द्वंद्व समास : दो शब्दों के बीच - चिन्ह आता है। माता -पिता पाप -पुण्य | |
| | | ವಿರಾಮ ಚಿನ್ಹೆ | ಒಂಬತ್ತು ವಿರಾಮ ಚಿನ್ಹೆಗಳನ್ನು ವಾಕ್ಯಗಳಲ್ಲಿ ಬಳಸಿ ಕಲಿಸುವುದು | |
| | | ಪರ್ಯಾಯೀ ವಾಚಿ ಶಬ್ದ / ಸಮನಾರ್ಥಕ ಶಬ್ದ | ಪಠ್ಯದ ಭಾಷಾಭ್ಯಾಸದಲ್ಲಿರು ಸಮನಾರ್ಥಕ ಶಬ್ದಗಳನ್ನು ಒಂದೆಡೆ ಬರೆಸಿ ಅವುಗಳಲ್ಲಿ ಬಹುಮುಖ್ಯವಾದವುಗಳನ್ನು ಆಭ್ಯಾಸ ಮಾಡಿಸುವುದು | |
| | | ವಚನ | ಪಠ್ಯದ ಭಾಷಾಭ್ಯಾಸದಲ್ಲಿರು ವಚನ ಬದಲಿಸುವ ಶಬ್ದಗಳನ್ನು ಒಂದೆಡೆ ಬರೆಸಿ ಅವುಗಳಲ್ಲಿ ಬಹುಮುಖ್ಯವಾದವುಗಳನ್ನು ಆಭ್ಯಾಸ ಮಾಡಿಸುವುದ | |

| ಕ್ರ.ಸಂ | ದಿನಾಂಕ | ಬೋಧಿಸಬೇಕಾದ ಕಲಿಕಾಂಶ | ಕೈಗೊಳ್ಳಬಹುದಾದ ಚಟುವಟಿಕೆಗಳು | ವಿದ್ಯಾರ್ಥಿ ಗಳಿಸಬಹುದಾದ ಅಂಕಗಳು |
|---|---|---|---|---|
| 6 | ಜನವರಿ 2025 ರಿಂದ ಫೆಬ್ರವರಿ 2025 ವರೆಗೆ | ಎರಡು ಅಂಕದ ಪ್ರಶ್ನೆಗಳು | ಗದ್ಯ ಭಾಗದಿಂದ ೮ ಪದ್ಯಭಾಗದಿಂದ 4 ಮತ್ತು ಪೂರಕವಾಚನ ದಿಂದ 4 ಅಂಕಗಳಿಗೆ ಪ್ರಶ್ನೆಗಳನ್ನು , ಪೂರಕವಾಚನದ 4 ಪ್ರಶ್ನೆಗಳನ್ನು ಕೇಳುವರು ಇವುಗಳಲ್ಲಿ ಸುಲಭವಾಗಿ ಉತ್ತರಿಸಬಹುದಾದ 4 ಪ್ರಶ್ನೆಗಳನ್ನು ಆಯ್ದುಕೊಂಡು ಅವುಗಳನ್ನು ಪ್ರತ್ಯೇಕವಾಗಿ ಬರೆಸುವುದು. | 8 |
| | | | ಪ್ರಶ್ನೆಗಳ ಉತ್ತರವನ್ನು ಖಂಡಗಳಾಗಿ ವಿಭಜಿಸಿ ಬರೆಯುವ ಅಭ್ಯಾಸ ಮಾಡಿಸುವುದು. | |
| | | | ಕಪ್ಪು ಹಲಗೆಯ ಮೇಲೆ ಉತ್ತರಗಳನ್ನು ಬರೆದು ಅರ್ಥ ತಿಳಿಸಿ ಬರೆಯಲು ಹೇಳುವುದು . | |
| | | | ಆದಷ್ಟು ವಿದ್ಯಾರ್ಥಿಗಳನ್ನು ಕಪ್ಪು ಹಲಗೆಯ ಮೇಲೆ ಬರೆಸುವುದು. | |
| | | | 4 ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಕಿರು ಪರೀಕ್ಷೆ ನಡೆಸುವುದು. | |
| | | | ಮತ್ತೊಮ್ಮೆ 4 ಪ್ರಶ್ನೆಗಳ ಕಲಿಕೆಯಲ್ಲಿ ವಿದ್ಯಾರ್ಥಿಗಳಿಗೆ ಕಠಿಣ ಎನಿಸಿದ ಅಂಶಗಳ ಕಡೆ ಒತ್ತು ನೀಡಿ ಕಲಿಸುವುದು. | |
| | | | 4 ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಕಿರು ಪರೀಕ್ಷೆ ನಡೆಸುವುದು | |

| ಕ್ರ.ಸಂ | ದಿನಾಂಕ | ಬೋಧಿಸಬೇಕಾದ ಕಲಿಕಾಂಶ | ಕೈಗೊಳ್ಳಬಹುದಾದ ಚಟುವಟಿಕೆಗಳು | ವಿದ್ಯಾರ್ಥಿ ಗಳಿಸಬಹುದಾದ ಅಂಕಗಳು |
|---|---|---|---|---|
| 7 | ಜನವರಿ 2025 ರಿಂದ ಫೆಬ್ರವರಿ 2025 ವರೆಗೆ | ಮೂರು ಅಂಕದ ಪ್ರಶ್ನೆಗಳು | ಗದ್ಯ ಭಾಗದಿಂದ 15 ಅಂಕಗಳು ಪದ್ಯಭಾಗದಿಂದ 9 ಅಂಕಗಳು ಮತ್ತು ಅನುವಾದಕ್ಕಾಗಿ 3 ಕೇಳುವರು ಇವುಗಳಲ್ಲಿ ಸುಲಭವಾಗಿ ಉತ್ತರಿಸಬಹುದಾದ 4 ಪ್ರಶ್ನೆಗಳನ್ನು ಆಯ್ದುಕೊಂಡು ಅವುಗಳನ್ನು ಪ್ರತ್ಯೇಕವಾಗಿ ಬರೆಸುವುದು. | 8 |
| | | | ಬಹುಮುಖ್ಯ ಹಿಂದಿನ ಪರೀಕ್ಷೆಗಳಲ್ಲಿ ಕೇಳಿರುವ ಮತ್ತು ಕೇಳಬಹುದಾದ ಪ್ರಶ್ನೆ ಕೋಠಿ ತಯಾರಿಸಿ ವಿದ್ಯಾರ್ಥಿಗಳಿಗೆ ನೀಡುವುದು. | |
| | | | ಎಲ್ಲಾ ದ್ವಿಪದಿಗಳ ಅರ್ಥ ಸುಲಭವಾಗಿ ಬರೆಯುವುದನ್ನು ಕಲಿಸುವುದು. | |
| | | | 4 ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಕಿರು ಪರೀಕ್ಷೆ ನಡೆಸುವುದು. | |
| | | | ಮತ್ತೊಮ್ಮೆ 4 ಪ್ರಶ್ನೆಗಳ ಕಲಿಕೆಯಲ್ಲಿ ವಿದ್ಯಾರ್ಥಿಗಳಿಗೆ ಕಠಿಣ ಎನಿಸಿದ ಅಂಶಗಳ ಕಡೆ ಒತ್ತು ನೀಡಿ ಕಲಿಸುವುದು | |

ವಿಷಯ ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ